**ಕರ್ನಾಟಕ ಸರ್ಕಾರ**

**ತುರ್ತು**

ಸಂಖ್ಯೆ: ಡಿಟಿಇ 07 ಎಂಎಸ್‌ಸಿ 2020/721

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ತಾಂತ್ರಿಕ ಶಿಕ್ಷಣ ಭವನ
ಅರಮನೆ ರಸ್ತೆ, ಬೆಂಗಳೂರು – 01.
ದಿ:04-01-2021

**ಸುತ್ತೋಲೆ**

ವಿಷಯ: ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಹಾಗೂ ಅಧೀನ ಸಂಸ್ಥೆಗಳಿಗೆ ಇ-ಪ್ರೂಕ್ಯೂರ್‌ಮೆಂಟ್ ಮೂಲಕ ಹೊರಗುತ್ತಿಗೆ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-ಡಿ ಸಿಬ್ಬಂದಿಗಳ ವೇತನ ಪಾವತಿ ಕುರಿತು.

ಉಲ್ಲೇಖ:

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಆದೇಶ ಸಂಖ್ಯೆ: ಡಿಟಿಇ 42 ಇಎಸ್‌ಟಿ(3)2017 ದಿನಾಂಕ;21.07.2018
2. ನಿರ್ದೇಶನಾಲಯದ ಕಛೇರಿ ಆದೇಶ ಸಂಖ್ಯೆ:ಡಿಟಿಇ/314338 ಮತ್ತು 358907/ಎಂಎಸ್‌ಸಿ/2020 ದಿ:22.10.2020
3. ನಿರ್ದೇಶನಾಲಯದ ಕಛೇರಿ ಆದೇಶ ಸಂಖ್ಯೆ:ಡಿಟಿಇ/314244 ಮತ್ತು 359018/ಎಂಎಸ್‌ಸಿ/2020 ದಿ:29.10.2020

* - * - * - *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಕಛೇರಿಯ ಹಾಗೂ ಕಾರ್ಯಗಾರದಲ್ಲಿನ ಗ್ರೂಪ್ ಡಿ ಹುದ್ದೆಗಳಿಗೆ ಎದುರಾಗಿ ಹೊರ ಗುತ್ತಿಗೆ ಮೇರೆಗೆ, ಸೇವೆ ಒದಗಿಸಲು ಮೆ ಆಬ್ಜೆಕ್ಟ್ ಟೆಕ್ನಾಲಜೀಸ್, ಬೆಂಗಳೂರು ಮತ್ತು ಮೆ ಮಾತಾ ಟೆಕ್ನಾಲಜೀಸ್, ದಾರವಾಡ ಈ 02 ಸಂಸ್ಥೆಗಳಿಗೆ ಅನುಮೋದನೆ ನೀಡಲಾಗಿದೆ.

ಉಲ್ಲೇಖ(2) ರ ನಿರ್ದೇಶನಾಲಯದ ಕಛೇರಿ ಆದೇಶದಲ್ಲಿ ಮಾರ್ಚ್-2020 ಮತ್ತು ಏಪ್ರಿಲ್-2020ರ ಮಾಹೆಯ ಹೊರ ಗುತ್ತಿಗೆ ಸಿಬ್ಬಂದಿಗಳ ವೇತನವನ್ನು ನವೆಂಬರ್-2020ರ ಮಾಹೆಯಲ್ಲಿ ಮೆ. ಆಬ್ಜೆಕ್ಟ್ ಟೆಕ್ನಾಲಜೀಸ್, ಬೆಂಗಳೂರು ಮತ್ತು ಮೆ. ಮಾತಾ ಟೆಕ್ನಾಲಜೀಸ್, ದಾರವಾಡ ಈ 02 ಸಂಸ್ಥೆಗಳಿಗೆ ಪಾವತಿ ಮಾಡಲಾಗಿರುತ್ತದೆ. ಆದ ಕಾರಣ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳ/ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರಿಗೆ ತಮ್ಮ ಸಂಸ್ಥೆಗಳಲ್ಲಿ ಮಾರ್ಚ್-2020 ಮತ್ತು ಏಪ್ರಿಲ್-2020ರ ಮಾಹೆಯಲ್ಲಿ ಕಾರ್ಯನಿರ್ವಹಿಸಿದ ಸಿಬ್ಬಂದಿಗಳಿಗೆ ಪಿಎಫ್, ಇಎಸ್‌ಐ/ ವೇತನ ಪಾವತಿಯಾಗಿರುವುದನ್ನು ಪರಿಶೀಲಿಸಿ ಕಾರ್ಯ ನಿರ್ವಹಿಸಿದ ಎಲ್ಲಾ

ಸಿಬ್ಬಂದಿಗಳಿಂದ ಪಾವತಿಯಾಗಿರುವುದರ ಬಗ್ಗೆ ದೃಢಪಡಿಸಿಕೊಂಡು, ಪಾವತಿಯಾಗಿದ್ದರೆ ಪಾವತಿಯಾಗಿದೆ ಎಂದು, ಪಾವತಿಯಾಗಿರದ್ದಿದರೆ ಆಗಿಲ್ಲ ಎಂಬುದರ ಬಗ್ಗೆ ದಿ:25.01.2021 ರಳೊಗೆ ನಿರ್ದೇಶನಾಲಯಕ್ಕೆ ಪತ್ರದ ಮುಂಖಾತರ ಮಾಹಿತಿ ನೀಡಲು ತಿಳಿಸಲಾಗಿದೆ. ಇಲ್ಲದಿದ್ದಲ್ಲಿ ಪಾವತಿಯಾಗಿರದ ಸಿಬ್ಬಂದಿಗಳಿಂದ ಸಮಸ್ಯೆಗಳೇನಾದರೂ ಉಂಟಾದಲ್ಲಿ ತಾವೇ ಹೊಣೆಗಾರರಾಗಿರುತ್ತಿರಿ ಎಂದು ಈ ಮೂಲಕ ತಿಳಿಸಲಾಗಿದೆ.

ಆಡಳಿತಾಧಿಕಾರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ,

1) ತಾಂತ್ರಿಕ ಶಿಕ್ಷಣ ಇಲಾಖೆಯ ಅದೀನದಲ್ಲಿನದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಗಳು/ ಇಂಜಿನಿಯರಿಂಗ್ ಕಾಲೇಜುಗಳು/ ಸರ್ಕಾರಿ ಕಿರಿಯ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರುಗಳ ಮುಂದಿನ ಸೂಕ್ತ ಕ್ರಮಕ್ಕಾಗಿ.
2) ಇ-ಆಡಳಿತ ಘಟಕಕ್ಕೆ ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಚುರಪಡಿಸುವುದು.